ಕಳಪೆ ರೇಷ್ಮೆ ಬಿತ್ತನೆ ಬೀಜದ ಸರಬರಾಜು ಬಗ್ಗೆ

1055(1245) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. 1999ನೇ ಸಾಲಿನಲ್ಲಿ ಸರ್ಕಾರಿ ರೇಷ್ಮೆಕಾರ್ಖಾನೆಗಳಲ್ಲಿ ಉತ್ಪಾದಿಸಿದ ದ್ವಿತಳಿಕಚ್ಚಾ ರೇಷ್ಮೆಯ ಗುಣಮಟ್ಟವು ದಿನೇ ದಿನೇ ಹಾಳಾಗುತ್ತಿರುವುದು ಹಾಗೂ ಅದರ ಸಾಮರ್ಥ್ಯ ಕುಂಟುತ್ತಿರುವುದು ಎಂಬುದಾಗಿ ತೀರ್ಮಾನ ಮಾಡಿ ಕಡಿಮೆ ದರ ನಿಗದಿಗೊಳಿಸಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿಈ ರೀತಿ ಕಡಿಮೆ ದರವನ್ನು ನಿಗದಿಗೊಳಿಸಿ ಮಾರಾಟ ಮಾಡಿದ್ದಕ್ಕೆ ಯಾವುದಾದರೂ ನಿದರ್ಶನಗಳಿವೆಯೇ?

ಇ. ಹಲವಾರು ವರ್ಷಗಳಲ್ಲಿ ಉತ್ಪಾದಿಸಿದ ರೇಷ್ಮೆಯನ್ನು ಒಂದು ಪ್ರೋತ್ಸಾಹಕ ಬೆಲೆಯಲ್ಲಿ ಮಾರಾಟ ಮಾಡಿಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಇದಕ್ಕಿರುವ ಅಧಿಕಾರಿಗಳು ಈ ತೀರ್ಮಾನ ಕೈಗೊಳ್ಳಲು ಇರುವ ಮೂಲಉದ್ದೇಶಗಳೇನು?

ಉ. ತಾಂತ್ರಿಕ ಅನುಭವದ ಕೊರತೆಯಿಂದಾಗಿ ಕಳಪೆ ಗುಣಮಟ್ಟದ ಬಿತ್ತನೆ ಬೀಜದ ಸರಬರಾಜು ಮಾಡುತ್ತಿರುವುದರಿಂದ ಈ ರೀತಿ ಕಳಪೆ ರೇಷ್ಮೆ ಉತ್ಪಾದನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ. ಹಾಗಿದ್ದಲ್ಲಿ ಇಂತಹ ಅಯುಕ್ತರ ಮೇಲೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ಇಲ್ಲ

ಆ. ಇಲ್ಲ.

ಇ. ಇಲ್ಲ. ಅನೇಕ ಬಗೆಯಲ್ಲಿ ಕಚ್ಚಾ ರೇಷ್ಮೆಯನ್ನು ತಯಾರಿಸಿ ಹೆಚ್ಚಿನ ದಿವಸ ಶೇಖರಿಸಿಟ್ಟಲ್ಲಿ ಅದರ ಗುಣಮಟ್ಟ ಕುಂದುವುದು ತಿಳಿದಂತಹ ಸಂಗತಿ ಈ ದಿಸೆಯಲ್ಲಿ ಸಂಬಂಧಪಟ್ಟ ತಜ್ಞರ ಅಭಿಪ್ರಾಯ ಪಡೆಯಲಾಗಿ, ಅವರು ಯಾವುದೇ ರೇಷ್ಮೆ ತಯಾರಿಸಿದ ಎರಡು ತಿಂಗಳು ಮೇಲ್ಪಟ್ಟು ಶೇಖರಿಸಿದ್ದೇ ಆದರೆ ಅದರ ಗುಣ ಮಟ್ಟ ಕ್ರಮೇಣ ಕ್ಷೀಣಿಸಿ ಅಪ್ರಯೋಜಕವಾಗುವ ಹಂತಕ್ಕೆ ತಲುಪುತ್ತದೆ ಎಂಬುದಾಗಿ ಅಭಿಪ್ರಾಯ ನೀಡಿರುವ ಹಿನ್ನೆಲೆಯಲ್ಲಿ ಈ ಮೇಲ್ಕಾಣಿಸಿರುವ ಎರಡು ವರ್ಷದ ಅವಧಿಯ ಕಚ್ಚಾರೇಷ್ಮೆಯು ಪೂರ್ಣ ಅಪ್ರಯೋ ಯೋಜಕವಾಗುವ ಸ್ಥಿತಿಯನ್ನುಮುಟ್ಟುವುದಕ್ಕೆ ಮುನ್ನ ಹಾಗೂ ಸರ್ಕಾರಕ್ಕೆನಷ್ಟವಾಗುವುದನ್ನು ತಪ್ಪಿಸಲು ಬಹಿರಂಗ ಹರಾಜಿನಲ್ಲಿ ರೇಷ್ಮೆ ವಿನಿಮಯ ಕೇಂದ್ರ ಇಲ್ಲಿ ವಿಲೇವಾರಿ ಮಾಡಲಾಯಿತು. ರೇಷ್ಮೆಯನ್ನು ಬಹಿರಂಗ ಹರಾಜಿನ ಮೂಲಕ ದೊರೆತ ಹೆಚ್ಚಿನ ದರಕ್ಕೆ ವಿಲೇವಾರಿ ಮಾಡಲಾಯಿತೇ ಹೊರತು ಪ್ರೋತ್ಸಾಹಕ ಬೆಲೆಗೆ ವಿಲೇವಾರಿ ಮಾಡಿರುವುದಿಲ್ಲ.

ಈ. ಪ್ರಶ್ನೆ (ಇ)ನಲ್ಲಿ ನೀಡಿರುವ ಉತ್ತರವು ಇದಕ್ಕೂ ಸಹ ಅನ್ವಯಿಸುತ್ತದೆ.

ಉ. ಇಲ್ಲ.

ಊ. ಉದ್ಭವಿಸುವುದಿಲ್ಲ.